ಓಂ ಶಾಂತಿ, ಬಾಪ್ ದಾದಾ, ಅವ್ಯಕ್ತ ಮುರಳಿ 20-10-1969.

(ओम शान्ति, बापदादा. अव्यक्त मुरली 20-10-1969)

*ಬಿಂದು ಮತ್ತು ಸಿಂಧುವಿನ ಸ್ಮೃತಿಯಿಂದ ಸಂಪೂರ್ಣತೆ*

(बिन्दु और सिन्धु की स्मृति से सम्पूर्णता)

ಇಂದು ಯಾವ ಸಂಘಟನೆಯಲ್ಲಿ ಬಾಪ್ ದಾದಾ ಬಂದಿರುವರು? ಇಂದಿನ ಸಂಘಟನೆಗೆ ಏನೆಂದು ಹೇಳುವಿರಿ? ಇಂದಿನ ಸಂಘಟನೆ ಜ್ಞಾನಸೂರ್ಯ ಮತ್ತು ನಕ್ಷತ್ರಗಳದಾಗಿದೆ. ಪ್ರತಿಯೊಂದು ನಕ್ಷತ್ರವೂ ತಮ್ಮಹೊಳಪನ್ನು ತೋರಿಸುವಂತಹವು. ಬಾಪ್ ದಾದಾ ಪ್ರತಿಯೊಬ್ಬರ ಹೊಳಪನ್ನು ನೋಡಲು ಬಂದಿದ್ದಾರೆ. ತಾವೆಲ್ಲರೂ ಈ ಭಟ್ಟಿಯಲ್ಲಿ ಏನಾಗಲು ಬಂದಿರುವಿರಿ? ಭಟ್ಟಿಯಲ್ಲಿ ಏನಾಗಬೇಕೆಂದು ಗೊತ್ತಿದೆಯಾ? ಫರಿಶ್ತಾ ಇನ್ನೂ ಆಗಿಲ್ಲವೇ? ಈ ಭಟ್ಟಿಯಲ್ಲಿ ಸಂಪೂರ್ಣತೆಯ ಸಿಕ್ಕಾ(ಗುರುತು) ಹಾಕಿಸಿಕೊಂಡು ಹೋಗುವಿರಿ. ಈಗ ಫರಿಶ್ತೆಗಳಾಗುವ ಪುರುಷಾರ್ಥಿಗಳಾಗಿರುವಿರಿ. ಆದರೆ ಸಂಪೂರ್ಣತೆಯಲ್ಲಿ ಯಾವ ಕೊರತೆಯಿದೆಯೋ ಅದನ್ನು ಈ ಭಟ್ಟಿಯಲ್ಲಿ ಸ್ವಾಹಾ ಮಾಡಲು ಬಂದಿರುವಿರಿ, ಹೀಗೆಯೇ ಇರುವಿರಲ್ಲವೇ? ಕೊರತೆಗಳನ್ನು ದೂರ ಮಾಡಿ ಸಂಪೂರ್ಣತೆಯ ಪೂರ್ಣ ಗುರುತನ್ನು ಹಚ್ಚಿಕೊಂಡು ಹೋಗಲು ಯಾವ ಮಾತನ್ನು ನೆನಪಿಟ್ಟುಕೊಳ್ಳುವಿರಿ? ಇಂದು ಬಾಪ್ ದಾದಾ ಬಹಳ ಸಹಜ ಮಾತನ್ನು ಹೇಳುತ್ತಾರೆ. ಅದಾಗಿದೆ **ನಾನು ಬಿಂದುವಾಗಿದ್ದೇನೆ ಮತ್ತು ತಂದೆಯೂ ಬಿಂದುವಾಗಿದ್ದಾರೆ ಆದರೆ ಬಿಂದುವಿನ ಜೊತೆಗೆ ಸಿಂಧುವಾಗಿದ್ದಾರೆ.** ಆದ್ದರಿಂದ ಬಿಂದು ಮತ್ತು ಸಿಂಧು, ಇದಾಗಿದೆ ತಂದೆ ಮತ್ತು ಮಕ್ಕಳ ಪರಿಚಯ. ಎರಡು ಶಬ್ದಗಳನ್ನು ನೆನಪಿಟ್ಟುಕೊಂಡರೆ ಸಂಪೂರ್ಣತೆ ಸಹಜವಾಗಿ ಬರುವುದು. ಶಾಲೆಯಲ್ಲಿ ಚಿಕ್ಕ ಮಕ್ಕಳಿಗೆ ಓದಿಸುವಾಗ ಮೊದಲು ಏನನ್ನುಕಲಿಸುತ್ತಾರೆ? ಮೊದಲು ಬಿಂದುವನ್ನು ಬರೆಯುತ್ತಾರೆ. ನಂತರ ಮುಂದುವರೆಸಿ ಒಂದು ಅಥವಾ ಅಲ್ಫ ಎಂದು ಕಲಿಸುತ್ತಾರೆ. ಆದ್ದರಿಂದ ಇದೂ ಒಂದು ಬಿಂದುವಾಗಿದೆ. ನಂತರ ಮುಂದುವರೆದಂತೆ ಬಿಂದುವಿನ ನೆನಪು ಒಂದು, ಆ ಒಂದರಲ್ಲಿ ಎಲ್ಲ ಮಾತುಗಳು ಬರುತ್ತವೆ. ಒಬ್ಬನ ನೆನಪು ಮತ್ತು ಏಕರಸ ಸ್ಥಿತಿ, ಒಬ್ಬನ ಮತ ಮತ್ತು ಒಬ್ಬನ ಕರ್ತವ್ಯದಲ್ಲಿ ಸಹಯೋಗಿ ಈ ಒಂದೊಂದು ಮಾತುಗಳನ್ನು ನೆನಪಿಟ್ಟುಕೊಂಡರೆ ತಮ್ಮನ್ನು ತಾವು ಬಹಳ ಮುಂದುವರೆಸಿಕೊಳ್ಳಬಹುದು. ಕೇವಲ ಬಿಂದು ಮತ್ತು ಒಂದು( ಬಿಂದುವಿನ ನೆನಪು), ಅದರಾಚೆಗೆ ವಿಸ್ತಾರದಲ್ಲಿ ಹೋಗುವ ಅವಶ್ಯಕತೆಯಿಲ್ಲ. ವಿಸ್ತಾರದಲ್ಲಿ ಹೋಗುವುದಾದರೆ ಕೇವಲ ಸೇವೆಗಾಗಿ, ಸೇವೆಯಿಲ್ಲದಿದ್ದರೆ ಬಿಂದು ಮತ್ತು ಒಂದು, ಇದರಾಚೆಗೆ ತಮ್ಮ ಬುದ್ಧಿಯನ್ನು ಉಪಯೋಗಿಸುವ ಅವಶ್ಯಕತೆಯಿಲ್ಲ. ಕೇವಲ ಈ ಮಾತುಗಳನ್ನು ನೆನಪಿಟ್ಟುಕೊಂಡರೆ ಸಹಜ ಸಂಪೂರ್ಣತೆ ಪಡೆಯಬಹುದು. ಸಹಜವೋ ಅಥವಾ ಕಠಿಣವೋ? ಸಹಜ ಮಾರ್ಗವಾಗಿದೆ ಆದರೆ ಸಹಜವಾದುದನ್ನು ಕಠಿಣ ಮಾಡುವವರು ಯಾರು? (ಸಂಸ್ಕಾರ) ಈ ಸಂಸ್ಕಾರಗಳೂ ಏಕೆ ಉತ್ಪನ್ನವಾಗುತ್ತವೆ? ಕೇವಲ ತಮ್ಮ ವಿಸ್ಮೃತಿ ಈ ಎಲ್ಲಾ ಮಾತುಗಳನ್ನು ಉತ್ಪನ್ನ ಮಾಡುತ್ತದೆ. ಹಳೆಯ ಸಂಸ್ಕಾರಗಳಾಗಲಿ, ಹಳೆಯ ಕರ್ಮಬಂಧನವಾಗಲಿ, ವರ್ತಮಾನದಲ್ಲಿ ಮಾಡಿದ ತಪ್ಪುಗಳಾಗಲಿ ಅವುಗಳಿಗೆ ಮೂಲ ಕಾರಣ ತಮ್ಮ ವಿಸ್ಮೃತಿಯಾಗಿದೆ. ಇದರಿಂದ ಈ ಎಲ್ಲಾ ವ್ಯರ್ಥ ಮಾತುಗಳು ಸಹಜವಾದುದನ್ನು ಕಠಿಣ ಮಾಡುತ್ತವೆ. ಸ್ಮೃತಿಯಿರುವುದರಿಂದ ಏನಾಗುತ್ತದೆ? ಯಾವ ಲಕ್ಷ್ಯವನ್ನಿಟ್ಟುಕೊಂಡು ಬಂದಿರುವಿರೋ ಅದು ಸಹಜ. "ಸ್ಮೃತಿಯಿಂದ ಸಂಪೂರ್ಣ, ವಿಸ್ಮೃತಿಯಿಂದ ಅಪೂರ್ಣ " ಆಗುವರು. ವಿಸ್ಮೃತಿಯಿದ್ದಾಗ ಬಹಳ ವಿಘ್ನಗಳು ಮತ್ತು ಸ್ಮೃತಿಯಿದ್ದಾಗ ಸಹಜ ಮತ್ತು ಸಂಪೂರ್ಣ, ಯಾವೆಲ್ಲ ಮಾತುಗಳನ್ನು ಕೇಳಿದಿರೋ ಇವುಗಳ ಸ್ಮೃತಿ ಶಕ್ತಿಶಾಲಿಯಾಗಿದ್ದರೆ ವಿಸ್ಮೃತಿ ಓಡಿ ಹೋಗುವುದು. ಸ್ಮೃತಿಯನ್ನು ಬಿಡದೇ ಇದ್ದರೆ ವಿಸ್ಮೃತಿ ಎಲ್ಲಿಂದ ಬರುವುದು? ಸೂರ್ಯಾಸ್ತವಾದಾಗ ಕತ್ತಲೆಯಾಗುತ್ತದೆ. ಸೂರ್ಯಾಸ್ತವಾಗದಿದ್ದರೆ ಕತ್ತಲೆ ಹೇಗೆ ಆಗುವುದು? ಅದೇ ರೀತಿ ಸ್ಮೃತಿಯ ಸೂರ್ಯ ಸದಾ ಇದ್ದಾಗ ವಿಸ್ಮೃತಿಯ

ಕತ್ತಲೆ ಬರಲಾರದು. ಈ ಅಲೌಕಿಕ ವ್ಯಾಯಾಮ ಗೊತ್ತಿದೆಯಾ? ಹೇಗೆ ಲೌಕಿಕ ವ್ಯಾಯಾಮ ಮಾಡುವವರು ಆರೋಗ್ಯವಂತರಾಗಿರುತ್ತಾರೆ ಮತ್ತು ಜೊತೆ-ಜೊತೆಗೆ ಶಕ್ತಿಶಾಲಿಯಾಗಿರುತ್ತಾರೆಯೋ ಹಾಗೆಯೇ ಈ ಅಲೌಕಿಕ ವ್ಯಾಯಾಮವನ್ನು ಯಾರು ಎಷ್ಟು ಮಾಡುತ್ತಾರೆಯೋ ಅಷ್ಟು ಆರೋಗ್ಯವಂತರಾಗಿರುತ್ತಾರೆ ಎಂದರೆ ಮಾಯೆಯ ವ್ಯಾಧಿ ಬರುವುದಿಲ್ಲ ಮತ್ತು ಶಕ್ತಿ ಸ್ವರೂಪ ಆಗಿರುತ್ತಾರೆ. ಎಷ್ಟೆಷ್ಟು ಈ ಅಲೌಕಿಕ ಬುದ್ಧಿಯ ವ್ಯಾಯಾಮವನ್ನು ಮಾಡುತ್ತಿರುವಿರೋ ಅಷ್ಟು ಏನಾಗಬೇಕೆಂಬ ಗುರಿಯಿದೆಯೋ ಅದಾಗುವಿರಿ. ವ್ಯಾಯಾಮ ಮಾಡುವಾಗ ಶಿಕ್ಷಕರು ಹೇಳಿದಂತೆ ಕೈ-ಕಾಲುಗಳನ್ನು ಅಲುಗಾಡಿಸುತ್ತಾರೆ ಹಾಗೆಯೇ ಇಲ್ಲಿಯೂ ಎಲ್ಲರಿಗೂ ಕ್ಷಣದಲ್ಲಿ ಸಾಕಾರಿಯಿಂದ ನಿರಾಕಾರಿಯಾಗಿ ಎಂದರೆ ಆಗಬಲ್ಲಿರಾ? ಆ ವ್ಯಾಯಾಮದಲ್ಲಿ ಹೇಗೆ ಸ್ಥೂಲ ಶರೀರದ ಕೈ-ಕಾಲುಗಳನ್ನು ಸಿಕ್ಕ ಆದೇಶದಂತೆ ತಕ್ಷಣ, ಅಲುಗಾಡಿಸುತ್ತೀರೋ ಅದೇ ರೀತಿ ಒಂದು ಕ್ಷಣದಲ್ಲಿ ಸಾಕಾರಿಯಿಂದ ನಿರಾಕಾರಿಯಾಗುವ ಅಭ್ಯಾಸವಿದೆಯೇ? ಎಷ್ಟು ಸಮಯ ಬೇಕಾಗುವುದು? ಇದು ನಮ್ಮದೇ ಮೂಲ ಸ್ವರೂಪವಾದಾಗ ಕ್ಷಣಮಾತ್ರದಲ್ಲಿ ಏಕೆ ಸ್ಥಿತರಾಗುವುದಿಲ್ಲ?. ಇನ್ನೂವರೆಗೂ ಕರ್ಮಬಂಧನವೇ? ಇನ್ನೂ ಈ ಕರ್ಮ ಬಂಧನದ ಶಬ್ದವನ್ನು ಹೇಳುತ್ತಲೇ ಇರುವಿರೇ? ಈ ಹಳೆಯ ಶರೀರ ಬಿಡುವವರೆಗೂ ಹೇಳುತ್ತಿರುವಿರೇ?.

ಈ ತರಗತಿಯಲ್ಲಿ ಪ್ರಶ್ನೆಗಳಿಗೆ ಉತ್ತರವನ್ನು ಹೇಳುವವರು ಯಾರಿದ್ದಾರೆ? ಬಹಳ ಹೆಸರುಗಳಿವೆ, ಪ್ರಶ್ನೆ-ಉತ್ತರಗಳಿಂದಾಚೆ ಹೋಗುವವರು ಯಾರಿದ್ದಾರೆ? ಈ ಭಟ್ಟಿಯಲ್ಲಿ ಪರೀಕ್ಷಿಸುವ ಶಕ್ತಿ ಬರುವುದು. ಪ್ರತಿಯೊಬ್ಬರೂ ನಾವು ಸಂಪೂರ್ಣರಾಗಿ ಹೋಗುವೆವೆಂದು ಪ್ರಯತ್ನ ಮಾಡಬೇಕು. ಈ ರೀತಿ ಈಗ ಆಗಲು ಸಾಧ್ಯವೇ? ಅಥವಾ ಅಂತ್ಯದಲ್ಲಿ ಆಗುವುದೋ? (ಆಗುತ್ತದೆ) ಹಾಗಾದರೆ ಅಂತ್ಯದವರೆಗೆ ಇದ್ದು ಮಾಡುವುದೇನು? (ಪ್ರಜೆಗಳನ್ನು ತಯಾರು ಮಾಡುವುದು) ಸ್ವಯಂ ರಾಜ, ಕಿರೀಟಧಾರಿಯಾಗುವಿರಿ ಮತ್ತು ಬೇರೆಯವರನ್ನು ಪ್ರಜೆಗಳನ್ನಾಗಿ ಮಾಡುವಿರಿ. ತಮ್ಮ ಸಮಾನ ಮಾಡಿಕೊಳ್ಳಬೇಕು. ಪ್ರಜೆಗಳನ್ನೂ ತಯಾರು ಮಾಡಬೇಕು. ಇಲ್ಲವಾದರೆ ಪ್ರಜೆಗಳಿಲ್ಲದೆ ರಾಜ್ಯಭಾರ ಯಾರ ಮೇಲೆ ಮಾಡುವಿರಿ? ಇಷ್ಟೆಲ್ಲಾ ನಕ್ಷತ್ರಗಳು ಸಂಪೂರ್ಣರಾಗಿಯೇ ಹೋಗುವರೆಂದು ತಿಳಿದುಕೊಳ್ಳಿ. ನಾವು ಸಂಪೂರ್ಣರಾಗಿ ಸರ್ವರನ್ನು ಮಾಡುತ್ತೇವೆ ಎಂಬ ಉತ್ಸಾಹ ಮತ್ತು ನಿಶ್ಚಯ ಪ್ರತಿಯೊಬ್ಬರಲ್ಲಿ ಇರಬೇಕಾದ ಅವಶ್ಯಕತೆಯಿದೆ. ಈ ಉತ್ಸಾಹ ಉಲ್ಲಾಸಗಳು ಸದಾ ಖಾಯಂ ಇದ್ದಾಗ ಅವಶ್ಯಕವಾಗಿ ಲಕ್ಷ್ಯವು ಪ್ರಾಪ್ತಿಯಾಗುತ್ತದೆ. ಯಜ್ಞ ಕುಂಡದ ಸ್ಮೃತಿಚಿಹ್ನೆಯನ್ನು ನೋಡಿದ್ದೀರಾ? ಯಜ್ಞದ ಪ್ರತಿಯೊಂದು ಸ್ಥಾನವು ಯಜ್ಞವೇ ಆಗಿದೆ ಆದರೆ ಯಜ್ಞ ಕುಂಡದ ಸ್ಥಾನವು ಮಹತ್ವವುಳ್ಳದ್ದಾಗಿರುತ್ತದೆ. ನದಿಗಳಾದ ಗಂಗೆ ಮತ್ತು ಯಮುನೆಯ ಮಹತ್ವವಿದೆ ಆದರೆ ಸಂಗಮದ ಮಹತ್ವ ಹೆಚ್ಚಾಗಿ ಇರುತ್ತದೆ. ಅಲ್ಲಿ ಸ್ನಾನ ಮಾಡುವುದು ಶ್ರೇಷ್ಠ ಎಂದು ತಿಳಿಯುತ್ತಾರೆ. ಅಲ್ಲಿಗೆ ಏಕೆ ಸ್ನಾನ ಮಾಡಲು ಹೋಗುತ್ತಾರೆ? ಅದರ ಸಂಗಮದ ವಿಶೇಷ ಮಹತ್ವ ಏನಾಗಿದೆ? ಸಂಗಮದ ಮಹತ್ವವನ್ನು ಚೆನ್ನಾಗಿ ತಿಳಿದುಕೊಂಡಿರುವಿರಿ ತಾನೆ. ವಿಶೇಷ ಸ್ಥಾನದ ವಿಶೇಷ ಮಹತ್ವವಿರುವಂತೆ ಮಧುಬನದ ಭಟ್ಟಿಯ ವಿಶೇಷ ಮಹತ್ವವಿದೆ. ಈ ಭಟ್ಟಿಯಿಂದ ಸಂಪೂರ್ಣತೆಯ ಉಡುಗೊರೆ ತಂದೆಯಿಂದ ಸಿಗುವುದು. ಈ ಮಿಲನದ ಎಂದರೆ ಸಂಗಮದ ವಿಶೇಷ ಸೌಭಾಗ್ಯ ಮಕ್ಕಳಿಗೆ ಸಿಗುತ್ತದೆ, ಈ ಮಿಲನವೇ ಸಂಪೂರ್ಣತೆಯ ಉಡುಗೊರೆಯ ರೂಪದಲ್ಲಿದೆ. ಈ ಸಂಗಮವೂ ಮಿಲನದ ಯಾದಗಾರ( ಸ್ಮೃತಿ ಚಿಹ್ನೆ) ಆಗಿದೆ. ಆದ್ದರಿಂದ ಈ ಮಿಲನವೇ ಸಂಪೂರ್ಣತೆಯ ಉಡುಗೊರೆಯಾಗಿದೆ. ಭಟ್ಟಿಯಿಂದ ಸಂಪೂರ್ಣತೆಯ ಗುರುತು ಹಾಕಿಸಿಕೊಂಡೇ ಹೋಗುವದು. ಅದರ ಜೊತೆಗೆ ಈ ಭಟ್ಟಿಯಲ್ಲಿ ಲೆಕ್ಕ ಮಾಡುವುದನ್ನು ಸಹ ಸರಿಯಾಗಿ ಕಲಿತುಕೊಳ್ಳಬೇಕು. ಅಲ್ಲಲ್ಲಿ ಲೆಕ್ಕ ಪೂರ್ಣ ಕಲಿಯದ ಕಾರಣ ಎಲ್ಲಿ ಕೂಡಿಸಬೇಕೋ ಅಲ್ಲಿ ಕಳೆಯುವಿರಿ, ಮತ್ತು ಎಲ್ಲಿ ಕಳೆಯಬೇಕೋ ಅಲ್ಲಿ ಕೂಡಿಸುತ್ತೀರಿ. ಆದ್ದರಿಂದ ಸ್ಥಿತಿ ತಳಮಳಗೊಳ್ಳುತ್ತದೆ. ಯಾವ ಮಾತನ್ನು ಜೋಡಿಸಬೇಕು ಹಾಗೂ ಯಾವ ಮಾತನ್ನು ಕತ್ತರಿಸಬೇಕು ಎಂಬ ಈ ಲೆಕ್ಕವನ್ನೂ ಸರಿಯಾಗಿ ಕಲಿತುಕೊಳ್ಳಬೇಕು. ಪ್ರವೃತ್ತಿಯಲ್ಲಿರುವ ಕಾರಣ ಎಲ್ಲಿ ಜೋಡಿಸಬಾರದೋ ಅಲ್ಲಿಯೂ ಜೋಡಿಸುತ್ತೀರಿ ಮತ್ತು ಎಲ್ಲಿ ಕತ್ತರಿಸಬಾರದೋ ಅಲ್ಲಿಯೂ ಕತ್ತರಿಸುತ್ತೀರಿ. ಈ ಸಣ್ಣ ಲೆಕ್ಕ ದೊಡ್ಡ ಸಮಸ್ಯೆಯ ರೂಪವಾಗುತ್ತದೆ. ಆದ್ದರಿಂದ ಪ್ರವೃತ್ತಿಯಲ್ಲಿರುತ್ತಿದ್ದರೂ ಏನನ್ನು ಜೋಡಿಸಬೇಕು. ಏನನ್ನು ಕತ್ತರಿಸಬೇಕು ಮತ್ತು ಜೋಡಿಸಬೇಕಾದರೆ ಎಲ್ಲಿಯವರೆಗೆ ಹಾಗೂ ಯಾವ ರೂಪದಲ್ಲಿ ಎಂಬುದನ್ನು ಪೂರ್ಣ ಕಲಿಯಬೇಕು. ತಮ್ಮನ್ನು ಭಟ್ಟಿಯಲ್ಲಿ

ಕರೆಯಲಾಗಿದೆ ಆದ್ದರಿಂದ ಅದರ ಕೆಲಸವನ್ನು ಸಹ ಹೇಳುತ್ತೇವೆ. ಅಧ್ಯಯನದ ಯಾವ ವಿಷಯಗಳಲ್ಲಿ ಪರಿಪಕ್ವರಾಗಬೇಕು? ಒಂದು ಅಲೌಕಿಕ ಈಶ್ವರೀಯ ವ್ಯಾಯಾಮದ ವಿಷಯ ಮತ್ತು ಎರಡನೆಯದು ಲೆಕ್ಕ ಮಾಡುವುದು. ಈ ಎರಡೂ ಮಾತುಗಳನ್ನು ಈ ಭಟ್ಟಿಯಲ್ಲಿ ಕಲಿಯಬೇಕು. ಈ ಎರಡೂ ಮಾತುಗಳಲ್ಲಿ ಸಂಪೂರ್ಣರಾದರೆ ಬಾಕಿ ಏನು ಉಳಿಯುವುದು ಸಂಪೂರ್ಣರಾಗಿಯೇ ಹೋಗುವಿರಿ ಆದರೆ ಬೇರೆಯವರನ್ನು ಮಾಡುವ ಕಾರ್ಯ ಉಳಿಯುವುದು. ಸಂಬಂಧದ ಕಾರಣಕ್ಕೆ ಹೋಗುವುದಲ್ಲ ಆದರೆ ಸೇವೆಯ ನಿಮಿತ್ತ ಹೋಗುವುದು. ಎಲ್ಲಿದ್ದರೂ ತಮ್ಮನ್ನು ಈ ರೀತಿ ತಿಳಿದರೆ ಸ್ಥಿತಿ ಅಲಿಪ್ತ ಮತ್ತು ಪ್ರಿಯವಾಗಿರುವುದು. ಹೇಗೆ ಬಾಪ್ ದಾದಾ ಸೇವೆಗಾಗಿ ಬರುವರು ಹೋಗುವರಲ್ಲವೇ ಹಾಗೆಯೇ ಎಲ್ಲರೂ ಕೇವಲ ಸೇವೆಗಾಗಿ ಹೋಗುವುದು ಮತ್ತು ಸೇವೆಯಲ್ಲಿ ಸಫಲತೆಯನ್ನು ಪಡೆದು ಪುನಃ ಸಮ್ಮುಖದಲ್ಲಿ ಬರುವುದು.

ಅವ್ಯಕ್ತ ವತನದಿಂದ ವರ್ತಮಾನ ಸಮಯ ಬಾಪ್ ದಾದಾ ಪ್ರತಿಯೊಬ್ಬರಿಗೂ ಯಾವ ಮಂತ್ರವನ್ನು ಕೊಡುತ್ತಾರೆ? "ಬೇಗ ಹೋಗಿ ಬೇಗ ಬನ್ನಿ" (go soon come soon) ಸೇವೆಗಾಗಿ ಹೋಗಿ ಮತ್ತು ಜೊತೆಗಾರರೊಂದಿಗೆ ಬೇಗ ಬನ್ನಿ, ಮತ್ತೆ ಹೋಗಿ, ಇಲ್ಲಿ ಯಾವಾಗ ಬೇಗ ಹೋಗಿ ಬೇಗ ಬರುವವರಾಗುವಿರೋ ಆಗ ಈ ಸ್ಥೂಲ ಮಂತ್ರ ನೆನಪಿನಲ್ಲಿರುವುದು. ಈ ಮಂತ್ರದ ಸಂಬಂಧ ಆ ಮಂತ್ರದೊಂದಿಗೆ ಇದೆ. ಆದ್ದರಿಂದಲೇ ಈ ಕುಂಡದ ಮಹತ್ವವನ್ನು ಹೇಳಿದೆವು. ಇಲ್ಲಿ ತಮಗೆ ಉಡುಗೊರೆಯ ರೂಪದಲ್ಲಿ ಸಿಗುತ್ತದೆ ಅಲ್ಲಿ ಪುರುಷಾರ್ಥದ ರೂಪದಲ್ಲಿ, ಈ ಕುಂಡದ ಮಹತ್ವ ವಿಶೇಷವಾಯಿತಲ್ಲವೇ? ಇಲ್ಲಿ ವರದಾನ ಅಲ್ಲಿ ಪರಿಶ್ರಮ, ಯಾವಾಗ ವರದಾನ ಸಿಗುತ್ತದೋ ಆಗ ಪರಿಶ್ರಮ ಏಕೆ ಮಾಡುತ್ತೀರಿ? ಈ ಯಜ್ಞಕುಂಡದಿಂದ ಮಾತನಾಡುವ ಭಾಷೆಯನ್ನೂ ಕಲಿತು ಹೋಗಬೇಕು. ತಮ್ಮನ್ನು ನೋಡಿ ಬೇರೆಯವರು ಆಕರ್ಷಿತರಾಗಿ ಯಜ್ಞಕುಂಡದಲ್ಲಿ ಸ್ವಾಹಾ ಆಗುವಂತಹ ಉತ್ತಮ ಉದಾಹರಣೆಯಾಗಬೇಕು.(sample).

ಬಾಪ್ ದಾದಾ ಎಲ್ಲಿಯವರೆಗೆ ತಮ್ಮ ಭಾಗ್ಯವನ್ನು ರೂಪಿಸಿಕೊಳ್ಳುತ್ತಾರೆಂದು ಪ್ರತಿಯೊಬ್ಬರ ಚಿತ್ರದಿಂದ ಅವರ ಭಾಗ್ಯವನ್ನು ಮತ್ತು ಪುರುಷಾರ್ಥವನ್ನು ನೋಡುತ್ತಾರೆ. ತಾವು ಯಾರನ್ನಾದರೂ ನೋಡಿದರೆ ಪ್ರತಿಯೊಬ್ಬರ ಚಿತ್ರದಿಂದ ಅವರ ಭಾಗ್ಯ, ಅವರ ಪುರುಷಾರ್ಥದ ವಿಶೇಷ ಗುಣವನ್ನು ನೋಡಿ, ಪ್ರತಿಯೊಬ್ಬರ ಪುರುಷಾರ್ಥದಲ್ಲಿ ವಿಶೇಷ ಗುಣ ಅವಶ್ಯವಾಗಿ ಇರುತ್ತದೆ. ಒಂದು ಗುಣ ಇನ್ನೊಂದು ಈರ್ಷ್ಯೆ, ( ಗುಣ್ ಔರ್ ಗ್ರುಣಾ, ಹಿಂದಿಯಲ್ಲಿ ಶಬ್ದ ಬಹಳ ಸಮೀಪವಾಗಿದೆ ಆದರೆ ಅರ್ಥದಲ್ಲಿ ಬಹಳ ವ್ಯತ್ಯಾಸವಿದೆ). ಗುಣ ನೋಡದಿದ್ದರೆ ಈರ್ಷ್ಯೆ ಬರುತ್ತದೆ, ಗುಣ ನೋಡಿದಾಗ ಈರ್ಷ್ಯೆ ಸಮಾಪ್ತಿಯಾಗುತ್ತದೆ. ಆದ್ದರಿಂದ ಪ್ರತಿಯೊಬ್ಬರ ಗುಣಗಳನ್ನು ನೋಡಬೇಕು.

ಪಾರ್ಟ್ಸ್ ನಿವಾಸಿಗಳು ಅತಿಸ್ನೇಹಿ ಮತ್ತು ಅತಿ ಪ್ರಿಯರು. ಆ ರೀತಿಯಾದ ಪರಸ್ಪರ ಸ್ನೇಹಿಯಾಗರುವವರ ಮೇಲೆ ಬಾಪ್ ದಾದಾ ಅವರ ಸ್ನೇಹವೂ ಜಾಸ್ತಿ ಇದೆ, ಸ್ನೇಹವೇ ಸಮೀಪ ತರುತ್ತದೆ ಎಷ್ಟು ಸ್ನೇಹಿಯೋ ಅಷ್ಟೇ ಸಮೀಪ, ಹಾಗಾದರೆ ಪರಸ್ಪರರು ಸ್ನೇಹಿಯಾಗಿರುವಿರಾ? ಈ ರೀತಿಯ ಸ್ನೇಹಿ ಮಕ್ಕಳೇ ಈಗಲೂ ಮತ್ತು ಭವಿಷ್ಯದಲ್ಲಿಯೂ ಸಮೀಪ ಬರಲು ಸಾಧ್ಯ. ವಿಶೇಷ ಸ್ನೇಹಿಯಾಗಿರುವುದರಿಂದ ಇಂದು ವಿಶೇಷವಾಗಿ ಡಬಲ್ ತಿಲಕ ಹಚ್ಚುತ್ತಿದ್ದೇವೆ. ಆದರೆ ಲೌಕಿಕ ರೀತಿಯದಲ್ಲ, ವಿಶೇಷವಾಗಿದೆ. ಡಬಲ್ ತಿಲಕ ಯಾವುದಾಗಿದೆ? ಒಂದು ನಿರಾಕಾರಿ ಮತ್ತೊಂದು ಅತೀತಸ್ಥಿತಿ(ಅಲಿಪ್ತತೆ). ಈ ಡಬಲ್ ತಿಲಕ ಪ್ರತಿಯೊಬ್ಬರ ಹಣೆಯ ಮೇಲೆ ಅವಿನಾಶಿಯಾಗಿ ಮಾಡಲು ಅವಿನಾಶಿ ರೂಪದಿಂದಲೇ ಹಚ್ಚುತ್ತಿದ್ದೇವೆ, ಈ ಅವಿನಾಶಿ ತಿಲಕ ಸದಾ ಇರುವುದೇ? ತಿಲಕ ಸೌಭಾಗ್ಯದ ಸಂಕೇತವಾಗಿದೆ ಎಂದು ಹೇಳುತ್ತಾರೆ ಈ ತಿಲಕವನ್ನು ಸದಾ ಇಟ್ಟುಕೊಳ್ಳಲು ಪ್ರಯತ್ನಿಸಿ. ಎಷ್ಟು ಪರಿಪಕ್ವವಾಗುವಿರೋ ಅಷ್ಟು ಪದವಿಯನ್ನು ಪಡೆಯುವಿರಿ. ನಾವೇ ಮೊದಲಿಗರು (number one) ಆಗಿದ್ದೇವೆ ಎಂದು ಪ್ರತಿಯೊಬ್ಬರೂ ಯೋಚಿಸಿ. ಎಲ್ಲರೂ ಮೊದಲಿಗರಾದರೆ ಎರಡನೆಯವರು (number two) ಯಾರು? ತಂದೆಯ ತರಗತಿಯಲ್ಲಿ ಎಂದಿಗೂ ನಂಬರ್ ತೆಗೆಯಲು ಬರುವುದಿಲ್ಲ.

ಶಿಕ್ಷಕನೂ ನಂಬರ್ ವನ್ ವಿದ್ಯಾರ್ಥಿಯೂ ನಂಬರ್ ವನ್, ಒಬ್ಬೊಬ್ಬರೂ ನಂಬರ್ ವನ್ ಆಗಿದ್ದಾರೆ. ಇಂತಹ ತರಗತಿಯ ಚಿತ್ರ ಮಧುಬನದಲ್ಲಿರಬೇಕು.

ಅವ್ಯಕ್ತ ಮುರಳಿ 20-10-1969.

***ಬಿಂದು ಮತ್ತು ಸಿಂಧುವಿನ ಸ್ಮೃತಿಯಿಂದ ಸಂಪೂರ್ಣತೆ.***

ಆತ್ಮಿಕ ಸ್ಥಿತಿಯಲ್ಲಿ ಇದ್ದು ಮನನ ಚಿಂತನೆ ಮಾಡಿ ಧಾರಣೆಯಲ್ಲಿ ತರಬೇಕಾಗಿರುವ ಸಂಕಲ್ಪಗಳು.

**ಆತ್ಮಿಕ ಸ್ಥಿತಿ/ಯೋಗ ಸ್ಥಿತಿ.**

ನಾನಾತ್ಮ ನಿರಾಕಾರ ಜ್ಯೋತಿರ್ಬಿಂದು ಸ್ವರೂಪ, ಶಿವಪರಮಾತ್ಮ ನನ್ನ ತಂದೆ.

1. ನಾನು ಸಂಪೂರ್ಣತೆಯ ಗುರುತನ್ನು ಹಾಕಿಸಿಕೊಂಡಿರುವ ಫರಿಶ್ತಾ ಸ್ವರೂಪ.

2. ನಾನು ನನ್ನ ಕೊರತೆಗಳೆಲ್ಲವನ್ನು ಯಜ್ಞದಲ್ಲಿ ಸ್ವಾಹ ಮಾಡಿರುವ ಸಂಪೂರ್ಣ ಸ್ವರೂಪ.

3. "ನಾನು ಬಿಂದುವಾಗಿದ್ದೇನೆ ಮತ್ತು ತಂದೆಯು ಬಿಂದುವಿನ ಜೊತೆ ಸಿಂಧು ಆಗಿದ್ದಾರೆ" ಎಂಬ ಸ್ಮೃತಿಯಿಂದ ನನ್ನ ಕೊರತೆಗಳನ್ನೆಲ್ಲವನ್ನು ತೊಲಗಿಸಿಕೊಂಡಿದ್ದೇನೆ.

4. ನಾನು ಸದಾ ಒಬ್ಬನ ಸ್ಮೃತಿ, ಏಕರಸ ಸ್ಥಿತಿ, ಒಂದೇ ಮತ ಮತ್ತು ಒಬ್ಬನ ಕರ್ತವ್ಯದಲ್ಲಿ ಸಹ ಯೋಗಿ. ಈ 'ಒಂದರ' ಸ್ಮೃತಿಯಲ್ಲಿ ಸದಾ ಇರುತ್ತಾ ನನ್ನ ಉನ್ನತಿಯನ್ನು ಮಾಡಿಕೊಂಡಿದ್ದೇನೆ.

5. ನಾನು ವಿಸ್ಮೃತಿಯನ್ನು ಸಮಾಪ್ತಿ ಮಾಡಿರುವ ಸಂಪೂರ್ಣ ಸ್ವರೂಪ.

6. ನಾನು ಸ್ಮೃತಿ ಎಂಬ ಸೂರ್ಯನನ್ನು ಸದಾ ನನ್ನೊಂದಿಗೆ ಇಟ್ಟುಕೊಂಡು ವಿಸ್ಮೃತಿ ಎಂಬ ಅಂಧಕಾರವನ್ನು ತೊಲಗಿಸಿದ್ದೇನೆ.

7. ನಾನು ಸದಾ ಅಲೌಕಿಕ ವ್ಯಾಯಾಮವನ್ನು ಮಾಡುತ್ತಾ ಮಾಯೆಯ ವ್ಯಾದಿಯಿಂದ ರಕ್ಷಿಸಿಕೊಂಡು ಆರೋಗ್ಯ ಮತ್ತು ಶಕ್ತಿಯಿಂದ ಇದ್ದೇನೆ.

8. ನಾನು ಕರ್ಮಬಂಧನ ಮುಕ್ತ ಸ್ವರೂಪ.

9. "ನಾನು ಸಂಪೂರ್ಣವಾಗಿ, ಸರ್ವರನ್ನೂ ಸಂಪೂರ್ಣವಾಗಿ ತಯಾರು ಮಾಡುವ" ನಿಶ್ಚಯ ಬುದ್ಧಿ ಸ್ವರೂಪ.

10. ನಾನು ಮಿಲನ (ಸಂಗಮ)ದ ವಿಶೇಷ ಸೌಭಾಗ್ಯವನ್ನು ಹೊಂದಿ ಸಂಪೂರ್ಣ ಬಹುಮತಿಯನ್ನು ಹೊಂದಿ ಸ್ಮೃತಿ ಚಿಹ್ನೆ (ಯಾದಗಾರ್ ಅನ್ನು) ತಯಾರು ಮಾಡಿಕೊಂಡಿದ್ದೇನೆ.

11. ನಾನು ಈಶ್ವರೀಯ ವ್ಯಾಯಾಮ ಮತ್ತು ಎಲ್ಲಿ ಕೂಡಿಸಬೇಕು(+), ಎಲ್ಲಿ ಕಳೆಯಬೇಕು(-) ಎಂದು ಕಲಿತಿರುವ ಪರಿಪಕ್ವ ಸ್ವರೂಪ.

12. ನಾನು ಪ್ರತಿಯೊಂದು ಕಾರ್ಯವನ್ನು ಈಶ್ವರೀಯ ಸೇವಾರ್ಥ ನಿಮಿತ್ತವಾಗಿ ಮಾಡುತ್ತಿದ್ದೇನೆ.

13. ನಾನು ಬಾಪ್ ದಾದಾರವರಿಂದ "ಬೇಗ ಹೋಗಿ, ಬೇಗ ಬನ್ನಿ" ಎಂಬ ಮಂತ್ರವನ್ನು ಸ್ವೀಕರಿಸಿರುವ ಸಹಯೋಗಿ.

14. ಬೇರೆಯವರು ನನ್ನನ್ನು ನೋಡಿ ಯಜ್ಞ ಕುಂಡದಲ್ಲಿ ಸ್ವಾಹ ಆಗುವಂತಹ ಉತ್ತಮ ಉದಾಹರಣೆ ನಾನಾಗಿದ್ದೇನೆ.

15. ನಾನು ಶಿವ ತಂದೆಯ ಸಮಾನ ಪ್ರತಿಯೊಬ್ಬರ ಚಿತ್ರದಿಂದ ಅವರ ಪುರುಷಾರ್ಥ ಮತ್ತು ವಿಶೇಷ ಗುಣಗಳನ್ನು ನೋಡುವ ಸ್ನೇಹ ಮತ್ತು ಪ್ರೇಮ ಸ್ವರೂಪ.

16. ನಾನು ವಿಶೇಷ ಸ್ನೇಹ ಮತ್ತು ಗುಣದಿಂದ ಈಗ ಬಾಪ್ ದಾದಾರವರೊಂದಿಗೆ ಇದ್ದೇನೆ ಮತ್ತು ಭವಿಷ್ಯದಲ್ಲಿ ಸಮೀಪ ಸಂಬಂಧದಲ್ಲಿ ಇರುತ್ತೇನೆ.

17. ನಾನು ಬಾಪ್ ದಾದಾರವರಿಂದ ನಿರಾಕಾರಿ ಮತ್ತು ಅತೀತ ಸ್ಥಿತಿಯ ತಿಲಕವನ್ನು ಹಚ್ಚಿಸಿಕೊಂಡಿರುವ ಸೌಭಾಗ್ಯ ಸ್ವರೂಪ.

18. ನಾನು ನನ್ನ ಪರಿಪಕ್ವತೆಯಿಂದ ಉನ್ನತ ಪದವಿಯನ್ನು ಹೊಂದಿದ್ದೇನೆ.

19. ನಾನು ನಂಬರ್ ವನ್ ವಿದ್ಯಾರ್ಥಿ.